**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆಃ- 52/2026**

**ಪ್ರಾಸಾಃ- 1 ಚಾಸಾಃ- 1**

| | | |
|---|---|---|
| ಸಾಕ್ಷಿಯ ಹೆಸರು | : | ಶಾಂತಮ್ಮ |
| ಗಂಡನ ಹೆಸರು | : | ಗೋವಿಂದಪ್ಪ |
| ವಯಸ್ಸು | : | 60 ವರ್ಷ |
| ವೃತ್ತಿ | : | ಗೃಹಿಣಿ |
| ವಾಸಸ್ಥಳ | : | ಸಿಂಧನೂರು |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 5.9.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ಚಾಸಾ 10 ನನ್ನ ಗಂಡ. ಚಾಸಾ 6 ನನ್ನ ಮಗ. ಚಾಸಾ 7 ಮತ್ತು 8 ರವರು ನನ್ನ ಸಹೋದರರು. ಚಾಸಾ 11 ಮತ್ತು 12 ನನ್ನ ಮೊಮ್ಮಕ್ಕಳು. ಚಾಸಾ 13 ನನ್ನ ತಂಗಿಯ ಮಗ. ನ್ಯಾಯಾಲಯದಲ್ಲಿರುವ ಆರೋಪಿ ಮೌನೇಶ್ ನನ್ನ ಅಳಿಯ. ಅವರು ಬಳ್ಳಾರಿಯ ಗೋನಾಳ್ ಗ್ರಾಮದವರು. ನಮ್ಮ ಮಗಳು ಅಶ್ವಿನಿರವರನ್ನು ಈಗ್ಗೆ ಸುಮಾರು 15 ವರ್ಷಗಳ ಹಿಂದೆ ಆರೋಪಿಗೆ ಕೊಟ್ಟು ಮದುವೆ ಮಾಡಲಾಯಿತು. ಅವರಿಗೆ ಚಾಸಾ 11 ಮತ್ತು 12 ರವರು ಮಕ್ಕಳು. ಮದುವೆಯಾಗಿ ಸುಮಾರು 4 ವರ್ಷ ನನ್ನ ಮಗಳನ್ನು ಸಂಬಾಳಿಸಿಕೊಂಡು ಹೋಗಿದ್ದರು. ನಂತರ ನನ್ನ ಮಗಳ ಮೇಲೆ ಅನುಮಾನಗೊಂಡು ಆರೋಪಿ ಯಾವಾಗಲೂ ಮಾನಸಿಕ ಹಿಂಸೆ ಕೊಡುತ್ತಿದ್ದರು. ಆ ವಿಚಾರವನ್ನು ನಮ್ಮ ಮಗಳು ದೂರವಾಣಿ ಕರೆ ಮಾಡಿದಾಗ ಹೇಳುತ್ತಿದ್ದಳು. ಆ ವಿಚಾರದಲ್ಲಿ ಪಂಚಾಯಿತಿ ಸಹ ಮಾಡಿದ್ದೆವು. ಆದರೂ ಸಹ ನನ್ನ ಮಗಳಿಗೆ ತವರು ಮನೆಗೆ ಬರಲು ಇಷ್ಟ ಇರಲಿಲ್ಲ. ಗಂಡನ ಜೊತೆ ಸಂಬಾಳಿಸಿಕೊಂಡು ಹೋಗು ಮಕ್ಕಳು ಇದ್ದಾರೆ ಎಂದು ಮಗಳಿಗೆ ಬುದ್ದಿವಾದ ಹೇಳಿದ್ದೆವು. ನನ್ನ ಮಗಳ ತಲೆ ಕೂದಲನ್ನು ಮೇಲಕ್ಕೆ ಎತ್ತಿ ಹಿಡಿದು ನೋವು ಕೊಡುವುದು, ಹೊಡೆಯುವುದು ಮಾಡುತ್ತಿದ್ದರು.

ದಿಃ 15-11-2025 ರಂದು ಆರೋಪಿ ನನ್ನ ಮಗ ಚೆನ್ನಕೇಶವ ರವರಿಗೆ ದೂರವಾಣಿ ಕರೆ ಮಾಡಿ ನೀವು ಬಂದು ನಿಮ್ಮ ತಂಗಿಯನ್ನು ಕರೆದುಕೊಂಡು

ಹೋಗಿ ಎಂದು ಹೇಳಿರುತ್ತಾರೆ. ನಿಮ್ಮ ತಂಗಿಗೆ ಆರಾಮ ಇಲ್ಲ ಬಂದು ಕರೆದುಕೊಂಡು ಹೋಗಿ ಎಂದು ಹೇಳಿರುತ್ತಾರೆ. ಶನಿವಾರ ಬೇಡ ಭಾನುವಾರ ಬಂದು ಕರೆದುಕೊಂಡು ಹೋಗಿ ಎಂದು ಹೇಳಿರುತ್ತಾರೆ. ಆದರೆ ಮದ್ಯಾಹ್ನ 3-00 ಗಂಟೆ ವೇಳೆಗೆ ಪುನಃ ಫೋನ್ ಮಾಡಿ ನಿಮ್ಮ ತಂಗಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ತಿಳಿಸಿರುತ್ತಾರೆ. ನಂತರ ನಾವುಗಳು ಸಂಜೆ 6-30 ರಿಂದ 7-00 ಗಂಟೆಗೆ ಗೋನಾಳ್ ಗ್ರಾಮಕ್ಕೆ ಬಂದೆವು. ಅಲ್ಲಿ ಬಂದಾಗ ಮೊದಲ ಕೋಣೆಯಲ್ಲಿ ನನ್ನ ಮಗಳ ಮೃತ ದೇಹವನ್ನು ಮಲಗಿಸಿದ್ದರು. ನಂತರ ಅಂಬುಲೆನ್ಸ್ ಕರೆಸಿ ಆಸ್ಪತ್ರೆಗೆ ಹೋದಾಗ ಆಕೆಯ ಜೀವ ಇಲ್ಲ ಎಂದು ಹೇಳಿದರು. ಆ ನಂತರ ನಮ್ಮ ಅಳಿಯನ ವಿರುದ್ದ ಕೇಸು ಮಾಡಿದೆವು. ನಮ್ಮ ಮಗಳ ಸಾವಿಗೆ ಆರೋಪಿಯೇ ಕಾರಣ ಆಗಿರುತ್ತಾರೆ.

ಸಾಕ್ಷಿಯು ಈಗ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1 (ಎ) ಎಂದು ಗುರುತಿಸಲಾಯಿತು. ದೂರನ್ನು ಬೆರಳಚ್ಚು ಮಾಡಲಾಯಿತು. ದೂರು ಕೊಟ್ಟ ನಂತರ ಪೋಲೀಸರು ಆರೋಪಿಯ ಮನೆಗೆ ಬಂದಿದ್ದರು. ಅಲ್ಲಿ ಜಾಗವನ್ನು ನಾನೇ ತೋರಿಸಿದೆ. ಆಗ ಪೋಲೀಸರು ಪಂಚನಾಮೆ ಮಾಡಿ ಫೋಟೋಗಳನ್ನು ತೆಗೆದರು. ಸಾಕ್ಷಿಯು ಸ್ಥಳ ಪಂಚನಾಮೆ ಮತ್ತು ನಕಾಶೆಯಲ್ಲಿ ತಮ್ಮ ಸಹಿಗಳನ್ನು ಗುರುತಿಸಿದ್ದಾರೆ. ಪಂಚನಾಮೆಯನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು, ಸ್ಥಳ ನಕ್ಷೆಯನ್ನು ನಿಪಿ-3 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ 5 ಫೋಟೋಗಳಲ್ಲಿ ನನ್ನ ಮಗಳ ಶವ ಕಾಣಿಸುತ್ತಿದೆ. ಅವುಗಳನ್ನು ನಿಪಿ-4 ರಿಂದ 8 ಎಂದು ಗುರುತಿಸಲಾಯಿತು.

ಪಂಚನಾಮೆ ಕಾಲಕ್ಕೆ ತೆಗೆದಿದ್ದರು ಎಂದು ಹೇಳುವ 2 ಫೋಟೋಗಳನ್ನು ಗುರುತಿಸಿದ್ದು ಅವುಗಳನ್ನು ನಿಪಿ-9 ಮತ್ತು 10 ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಹಗ್ಗವನ್ನು ಜಪ್ತು ಮಾಡಿಕೊಂಡರು. ಸದರಿ ಹಗ್ಗ ಮಂಚದ ಕೆಳಗೆ ಇತ್ತು. ಈ ಹಂತದಲ್ಲಿ ಸೀಲು ಮಾಡಿದ ಬಟ್ಟೆಗಯನ್ನು ತೆಗೆದು ನೋಡಿ ಅದರಲ್ಲಿದ್ದ ಪ್ಲಾಸ್ಟಿಕ್ ಹಗ್ಗವನ್ನು ತೆಗೆದು ತೋರಿಸಿದಾಗ ಅದನುಜ್ನ ಗುರುತಿಸಿದ್ದಾರೆ. ಅದನ್ನು ಮು ಮಾ 1 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಆರ್ ಎಸ್ ವಕೀಲರಿಂದಃ

ನನಗೆ ಕನ್ನಡ ಓದಲು ಬರೆಯಲು ಅಷ್ಟು ಬರುವುದಿಲ್ಲ. ನಮ್ಮ ಊರು ಸಿಂಧನೂರು. 2011 ರಲ್ಲಿ ರಾಯದುರ್ಗದ ಪಕ್ಕ ಆವುದಟ್ಲ ಗ್ರಾಮದಲ್ಲಿ ವಾಸವಾಗಿದ್ದೆವು. ನಮ್ಮ ಮಗಳ ಮದುವೆಯನ್ನು ಅಲ್ಲಿಯೇ ಮಾಡಿದ್ದೆವು. ಆರೋಪಿ ನಮಗೆ ಹೊಸ ಸಂಬಂಧ. ನಿಪಿ-1 ರ ದೂರನ್ನು ನಾನು ಬರೆಸಿಲ್ಲ ಎಂದರೆ ಸರಿ.

ನಮ್ಮ ಮಗಳ ಮೊಬೈಲ್ ಸಂಖ್ಯೆ ಮತ್ತು ನಮ್ಮ ಮೊಬೈಲ್ ಸಂಖ್ಯೆಯನ್ನು ದೂರಿನಲ್ಲಿ ಹೇಳಿ ಬರೆಸಿಲ್ಲ. ಚಾಸಾ 11 ಮತ್ತು 12 ರವರು 6 ಮತ್ತು 8 ನೇ ತರಗತಿಯಲ್ಲಿ ಓದುತ್ತಿದ್ದಾರೆ. ಆರೋಪಿ, ಆತನ ಹೆಂಡತಿ ಮತ್ತು ಮಕ್ಕಳು ಒಂದೇ ಮನೆಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿ. ನನ್ನ ಮಗಳು ತೀರಿಕೊಳ್ಳುವ ಕಾಲಕ್ಕೆ ಮದುವೆಯಾಗಿ ಸುಮಾರು 14 ವರ್ಷ ಆಗಿತ್ತು ಎಂದರೆ ಸರಿ. ಆ 14 ವರ್ಷ ಸಾಂಸಾರಿಕ ಜೀವನದಲ್ಲಿ ನಮ್ಮ ಮಗಳು ತನ್ನ ಗಂಡನ ವಿರುದ್ದ ಯಾವುದೇ ಪೋಲೀಸ್ ಠಾಣೆಯಲ್ಲಿ ದೂರು ಕೊಟ್ಟಿಲ್ಲ ಎಂದರೆ ಸರಿ. ಆದರೆ ನಾವು ದೂರು ಕೊಟ್ಟಿದ್ದೆವು. ಆ ರೀತಿ ದೂರು ಕೊಟ್ಟಿದ್ದ ಬಗ್ಗೆ ನಿಪಿ-1 ರಲ್ಲಿ ಬರೆಸಿಲ್ಲ ಎಂದರೆ ಸರಿ. ನನ್ನ ಮಗಳು ವಿದ್ಯಾವಂತೆ ಎಂದರೆ ಸರಿ.

ನಾನು ಮತ್ತು ನಮ್ಮ ಮಗ ಚಾಸಾ 6 ಸಿಂಧನೂರಿನಲ್ಲಿ ವಾಸ ಮಾಡುತ್ತಿದ್ದೆವು ಎಂದರೆ ಸರಿ. ಯಾವ ವರ್ಷದಲ್ಲಿ, ಯಾವ ಸ್ಥಳದಲ್ಲಿ, ಯಾವ ಪಂಚಾಯಿತಿದಾರರ ಸಮಕ್ಷಮ ಪಂಚಾಯಿತಿ ಮಾಡಿಸಿದೆವು ಎಂದು ದೂರಿನಲ್ಲಿ ಬರೆಸಿಲ್ಲ ಎಂದರೆ ಸರಿ.

ಪೋಲೀಸರು ತೋರಿಸು ಎಂದು ಹೇಳಿದ ಕಾರಣ ನಾನು ಕೈಯಲ್ಲಿ ತೋರಿಸಿದ್ದೇನೆ ಎಂದರೆ ಸರಿ. ಮು ಮಾ 1 ರೀತಿಯ ಹಗ್ಗಗಳು ಸಾಮಾನ್ಯವಾಗಿ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ಆ ಹಗ್ಗ ಎಲ್ಲಿ ಇತ್ತು, ಅದರ ಬಣ್ಣ ಏನು ಎಂದು ಹೇಳಿ ಬರೆಸಿಲ್ಲ ಎಂದರೆ ಸರಿ. ಹಗ್ಗವನ್ನು ಪೋಲೀಸರು ತೋರಿಸಿ ನನ್ನಕೈಗೆ ಕೊಟ್ಟರು ಎಂದರೆ ಸರಿ. ಫೋಟೋಗಳನ್ನು 17 ನೇ ತಾರೀಖಿನಂದು ತೆಗೆದರು. ಸಾಕ್ಷಿ ಮುಂದುವರೆದು ಪಂಚನಾಮೆ ಕಾಲಕ್ಕೆ 18 ನೇ ತಾರೀಖಿನಂದು ತೆಗೆದರು ಎಂದು ನುಡಿದಿರುತ್ತಾರೆ. ದೂರು ಕೊಡುವ ಕಾಲಕ್ಕೆ ನಾನು ಮನೆಯ

ಒಳಗಡೆ ಓಡಾಡಿದ್ದೆ ಎಂದರೆ ಸರಿಯಲ್ಲ. ದೂರು ಕೊಡುವ ಕಾಲಕ್ಕೆ ನನ್ನ ಮಗಳ ದೇಹದಲ್ಲಿ ಏನೇನು ಗಾಯಗಳು ಇದ್ದವು ಎನ್ನುವುದನ್ನು ಹೇಳಿ ಬರೆಸಿಲ್ಲ. ಮನೆಯ ಒಳಗಡೆ ಹೆಣ ಇತ್ತು ಎನ್ನುವ ಬಗ್ಗೆ ಪೋಲೀಸರು ಯಾವುದೇ ಪೋಟೋ ತೆಗೆದಿಲ್ಲ ಎಂದರೆ ಸರಿ. ದೂರನ್ನು ಏಕೆ ತಡವಾಗಿ ಕೊಡಲಾಗಿದೆ ಎಂದು ಬರೆಸಿಲ್ಲ ಎಂದರೆ ಗೊತ್ತಿಲ್ಲ. ಚಾಸಾ 2 ಮತ್ತು 5 ರವರು ನನ್ನ ತಮ್ಮನ ಸ್ನೇಹಿತರು. ನನ್ನ ತಮ್ಮನ ಹೆಸರು ಕೃಷ್ಣ. ನಿಮ್ಮ ಮಗಳು ಹೇಗೆ ಸತ್ತರು, ಯಾವಾಗ ಸತ್ತರು ಎನ್ನುವ ಬಗ್ಗೆ ನಿಮಗೆ ಮಾಹಿತಿ ಇಲ್ಲ ಎಂದರೆ ಪೋನ್ ಮಾಡಿದ ನಂತರ ಬಂದೆವು ಎಂದು ನುಡಿದಿದ್ದಾರೆ.

ನಮ್ಮ ಅಳಿಯ ಕೆಲಸಕ್ಕೆ ಹೋಗುತ್ತಿದ್ದರು ಎಂದರೆ ಸರಿ. ಬೆಳಿಗ್ಗೆ ಹೋದರೆ ಸಂಜೆ 6-30 ಕ್ಕೆ ಬರುತ್ತಿದ್ದರು ಎಂದರೆ ಮದ್ಯಾಹ್ನ ಊಟಕ್ಕೆ ಬರುತ್ತಿದ್ದರು ಎಂದು ನುಡಿದಿದ್ದಾರೆ. ಯಾವಾಗ ಬರುತ್ತಿದ್ದರು, ಯಾವಾಗ ಹೋಗುತ್ತಿದ್ದರು ಎನ್ನುವುದನ್ನು ನಾನು ನೋಡಿಲ್ಲ. ನಾನು ಮತ್ತು ನನ್ನ ಮಗ ಸೇರಿಕೊಂಡು ನಮ್ಮ ಮಗಳ ಸಾವನ್ನು ದುರ್ಬಳಕೆ ಮಾಡಿಕೊಂಡು ಸುಳ್ಳು ದೂರು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಪಂಚನಾಮೆ ಕ್ರಮ ಜರುಗಿಸಿಲ್ಲ, ಅದೆಲ್ಲಾ ಸುಳ್ಳು ಎಂದರೆ ಸರಿಯಲ್ಲ. ಪೋಟೋಗಳನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಪೋಲೀಸರೇ ಬರೆಸಿದ್ದು ನಂತರ ನಮ್ಮ ಸಹಿ ಪಡೆದಿದ್ದಾರೆ ಎಂದರೆ ಸರಿ. ಪಂಚನಾಮೆಯಲ್ಲಿ ಸಹಿಯನ್ನು ಪೋಲೀಸ್ ಠಾಣೆಯಲ್ಲಿ ಹಾಕಿದ್ದೇನೆ ಎಂದರೆ ಸರಿ. ನನ್ನ ಮಗಳು ಮತ್ತು ಅಳಿಯ ಚೆನ್ನಾಗಿಯೇ ಇದ್ದರು, ಹೆಂಡತಿಗೆ ಆರೋಪಿ ಯಾವುದೆ ರೀತಿ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೆ. ಸರಿ ಇದೆ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**

**<u>1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ</u>**

**<u>ವಿಶೇಷ ಮೊಕದ್ದಮೆ ಸಂಖ್ಯೆಃ- 52/2026</u>**

**ಪ್ರಾಸಾಃ- 2 ಚಾಸಾಃ- 6**

| | | |
|---|---|---|
| ಸಾಕ್ಷಿಯ ಹೆಸರು | : | ಚೆನ್ನಕೇಶವ |
| ತಂದೆಯ ಹೆಸರು | : | ಗೋವಿಂದಪ್ಪ |
| ವಯಸ್ಸು | : | 38 ವರ್ಷ |
| ವೃತ್ತಿ | : | ಲ್ಯಾಬ್ ಟೆಕ್ನಿಷಿಯನ್ ಕೆಲಸ |
| ವಾಸಸ್ಥಳ | : | ಸಿಂಧನೂರು |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 5.9.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ಚಾಸಾ 1 ನನ್ನ ತಾಯಿ, ಚಾಸಾ 10 ನನ್ನ ತಂದೆ. ಚಾಸಾ 7 ಮತ್ತು 8 ನನ್ನ ಸೋದರ ಮಾವಂದಿರು. ಚಾಸಾ 11 ಮತ್ತು 12 ನನ್ನ ತಂಗಿ ಅಶ್ವಿನಿಯ ಮಕ್ಕಳು. ಚಾಸಾ 13 ನನ್ನ ಚಿಕ್ಕಮ್ಮನ ಮಗ. ಆರೋಪಿ ನನ್ನ ಅಶ್ವಿನಿರವರ ಗಂಡ. ಆರೋಪಿ ಬಳ್ಳಾರಿ ತಾಲ್ಲೂಕು ಬಿ.ಗೋನಾಳ್ ಗ್ರಾಮದವರು. ನನ್ನ ತಂಗಿ ಅಶ್ವಿನಿರವರನ್ನು ಆರೋಪಿ ಜೊತೆ 2012 ರಲ್ಲಿ ಮದುವೆ ಮಾಡಲಾಗಿತ್ತು. ಅವರಿಗೆ ಚಾಸಾ 11 ಮತ್ತು 12 ಮಕ್ಕಳು ಇರುತ್ತಾರೆ.

ಮದುವೆ ಕಾಲಕ್ಕೆ ಆರೋಪಿ ಮಹೆಂದ್ರಶೋರೂಂ ನಲ್ಲಿ ಮಾರಾಟ ಸಹಾಯಕರಾಗಿ ಕೆಲಸ ಮಾಡುತ್ತಿದ್ದರು. ಅವರ ವ್ಯಾಪಾರ ಚೆನ್ನಾಗಿ ನಡೆಯುತ್ತಿತ್ತು. ಆಗ ನನ್ನ ತಂಗಿಯನ್ನು ಚೆನ್ನಾಗಿ ನೋಡಿಕೊಂಡಿದ್ದರು. 4 ವರ್ಷದ ನಂತರ ಆರೋಪಿಯ ನನ್ನ ತಂಗಿಯ ಮೇಲೆ ಅನುಮಾನಪಟ್ಟು ಅವಾಚ್ಯ ಶಬ್ದಗಳಿಂದ ಬೈದು ಕಿರುಕುಳ ಕೊಡಲು ಪ್ರಾರಂಭ ಮಾಡಿದರು. ಆ ವಿಚಾರವನ್ನು ನನ್ನ ತಂಗಿ ಫೋನ್ ಮೂಲಕ ನಮಗೆ ಹೇಳುತ್ತಿದ್ದಳು. ಆ ವಿಚಾರದಲ್ಲಿ ಪಂಚಾಯಿತಿ ಮಾಡಿಸಿದ್ದೆವು. ಪಂಚಾಯಿತಿಯಲ್ಲಿ ಆರೋಪಿಯು ಇನ್ನೂ ಮುಂದೆ ಹೆಂಡತಿಗೆ ಕಿರುಕುಳ ಕೊಡುವುದಿಲ್ಲ ಎಂದು ಹೇಳಿದ್ದರು. ಆದರೆ ಮುಂದೆ ಸರಿ ಹೋಗಲಿಲ್ಲ. ಚಾಸಾ 7, 8 ಹಾಗೂ ಊರಿನ ಹಿರಿಯರು ಸೇರಿ ಪಂಚಾಯಿತಿ ಮಾಡಿದ್ದರು.

ಕಳೆದ ವರ್ಷದ ದೀಪಾವಳಿ ಸಂದರ್ಭದಲ್ಲಿ ಆರೋಪಿಯು ತನ್ನ ಹೆಂಡತಿಯನ್ನು ಕುರಿತು ನಿನಗೆ ಬೇರೆಯವರ ಜೊತೆ ಅಕ್ರಮ ಸಂಬಂಧ ಇದೆ, ಸಂಸಾರ ಮಾಡಲು ಇಷ್ಟ ಇಲ್ಲ ಎಂದರೆ ಅವರ ಜೊತೆ ಮದುವೆ ಮಾಡಿಕೊಡುತ್ತೇನೆ ಎಂದು ಹಿಂಸೆ ಕೊಡಲು ಪ್ರಾರಂಭಿಸಿದರು. ನವೆಂಬರ್ 10 ನೇ ತಾರೀಖಿನಂದು ಆರೋಪಿ ಮತ್ತು ನನ್ನ ತಂಗಿ ಸಿಂಧನೂರಿಗೆ ಬಂದಿದ್ದು ಬೆಳಗಿನಿಂದ ಸಂಜೆವರೆಗೆ ನಮ್ಮ ಕಚೇರಿಯಲ್ಲಿದ್ದರು. ಸಂಜೆ ಬಸ್ಸಿನಲ್ಲಿ ವಾಪಾಸ್ಸು ಹೋದರು. ಆ ದಿವಸ ಸಹ ಇನ್ನೂ ಮುಂದೆ ನಿಮ್ಮ ತಂಗಿಗೆ ಯಾವುದೇ ತೊಂದರೆ ಕೊಡುವುದಿಲ್ಲ ಎಂದು ಹೇಳಿ ಹೋದರು.

ದಿಃ 15-11-2025 ರಂದು ಬೆಳಿಗ್ಗೆ 10-00 ಗಂಟೆ ಸುಮಾರಿಗೆ ನನ್ನ ತಂಗಿ ಆರೋಪಿ ತನ್ನ ಹೆಂಡತಿಯ ಮೂಲಕ ನನಗೆ ಫೋನ್ ಮಾಡಿಸಿದರು. ನನ್ನ ತಂಗಿ ನನ್ನನ್ನು ಕುರಿತು ತನ್ನನ್ನು ನಿಮ್ಮ ಮನೆಗೆ ಕರೆದುಕೊಂಡು ಹೋಗುತ್ತೀರಾ ಎಂದು ಕೇಳಿದರು ಆಗ ಆಯಿತು ನಾನು ಬರುತ್ತೇನೆ ಎಂದು ಹೇಳಿದೆ. ಎರಡು ನಿಮಿಷ ಆದ ನಂತರ ಪುನಃ ಆರೋಪಿ ನನಗೆ ಫೋನ್ ಮಾಡಿದರು. ಫೋನ್‌ನಲ್ಲಿ ಆ ದಿನ ಶನಿವಾರ ಇರುವ ಕಾರಣ ಮಾರನೇ ದಿವಸ ಬರುವಂತೆ ಹೇಳಿದರು. ಮದ್ಯಾಹ್ನ 3-00 ಗಂಟೆ ವೇಳೆಗೆ ಪುನಃ ಆರೋಪಿ ನನಗೆ ದೂರವಾಣಿ ಕರೆ ಮಾಡಿ ನಮಗೆ ಮೋಸ ಆಗಿದೆ ನಿಮ್ಮ ತಂಗಿ ಆತ್ಮಹತ್ಯೆ ಮಾಡಿಕೊಂಡು ತೀರಿಕೊಂಡಿದ್ದಾಳೆ ಎಂದು ತಿಳಿಸಿದಳು. ನಂತರ ಚಾಸಾ 11 ಮತ್ತು 12 ರವರಿಂದ ನಿರಂತರವಾಗಿ ದೂರವಾಣಿ ಕರೆ ಬರುತ್ತಿತ್ತು. ನಂತರ ನಾನೊಬ್ಬನೇ ಬೈಕ್‌ನಲ್ಲಿ ಗೋನಾಳ್ ಗ್ರಾಮಕ್ಕೆ ಬಂದೆ. ಬರುವಾಗ ನಮ್ಮ ಮನೆಯಲ್ಲಿ ಮತ್ತು ನನ್ನ ಸೋದರ ಮಾವನವರಿಗೆ ತಿಳಿಸಿದ್ದೆ. ನಾನು ಆರೋಪಿ ಮನೆಗೆ ಬಂದು ನೋಡಿದಾಗ ಆಗಲೇ ಒಂದು ಬೆಡ್ ಶೀಟ್ ಹಾಕಿ ನನ್ನ ತಂಗಿಯನ್ನು ಕೆಳಗೆ ಮಲಗಿಸಿದ್ದರು. ಅಲ್ಲಿ ಯಾವುದೇ ರೀತಿ ಫ್ಯಾನ್ ಗೆ ಹಗ್ಗ ಹಾಕಿದ್ದು ಕಂಡು ಬರಲಿಲ್ಲ. ನಂತರ ನನ್ನ ತಂದೆ ತಾಯಿ ಬಂದ ನಂತರ ಅಂಬುಲೆನ್ಸ್ ಕರೆಸಿ ನನ್ನ ತಂಗಿಯನ್ನು ವಿಮ್ಸ್ ಆಸ್ಪತ್ರೆಗೆ ತೆಗೆದುಕೊಂಡು ಹೋದೆವು. ವೈದ್ಯರು ಪರೀಕ್ಷೆ ಮಾಡಿ ಆಗಲೇ ಮೃತ ಪಟ್ಟಿರುವುದಾಗಿ ತಿಳಿಸಿದರು.

ನನ್ನ ತಂಗಿಯ ಮೇಲೆ ಅನುಮಾನಪಟ್ಟು ಪದೇ ಪದೇ ಮಾನಸಿಕ ದೈಹಿಕ ಹಿಂಸೆ ನೀಡಿದ ಕಾರಣ ನನ್ನ ತಂಗಿ ತೀರಿಕೊಂಡಿದ್ದಾಳೆ ಅದಕ್ಕೆ ಆರೋಪಿಯೇ ಕಾರಣ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಆರ್ ಎಸ್ ವಕೀಲರಿಂದಃ

ನನ್ನ ತಂಗಿ ಬಿ ಎ ಮತ್ತು ನರ್ಸಿಂಗ್ ವ್ಯಾಸಾಂಗ ಮಾಡಿದ್ದರು. ಆರೋಪಿ ನಮಗೆ ಹೊಸ ಸಂಬಂಧ ಎಂದರೆ ಸರಿ. ಗೋನಾಳ್ ಗ್ರಾಮಕ್ಕೂ ಮತ್ತು ಆರೋಪಿ ಕೆಲಸ ಮಾಡುತ್ತಿದ್ದ ಮಹೇಂದ್ರ ಶೋರೂಂ ಗೆ ಸುಮಾರು 8 ರಿಂದ 10 ಕಿ. ಮೀ. ಅಂತರ ಎಂದರೆ ಇರಬಹುದು. ನನ್ನ ತಂಗಿಯ ಮಕ್ಕಳು ಗೋನಾಳ್ ಗ್ರಾಮದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು ಎಂದರೆ ಸರಿ. 2025 ರಲ್ಲಿ ಅವರು ಕ್ರಮವಾಗಿ 5 ಮತ್ತು 7 ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು. ನಮ್ಮ ತಾಯಿ 4 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ. ಅವರಿಗೆ ಕನ್ನಡ ಓದಲು ಮತ್ತು ಬರೆಯಲು ಅಷ್ಟು ಸ್ಪಷ್ಟವಾಗಿ ಬರುವುದಿಲ್ಲ. ದೂರನ್ನು ಮಹಿಳಾ ಪೋಲೀಸ್ ಠಾಣೆಯಲ್ಲಿ ಬೆರಳಚ್ಚು ಮಾಡಿಸಿದೆವು. ದೂರನ್ನು ನಾನೇ ಹೇಳಿ ಪೋಲೀಸರ ಮೂಲಕ ಬೆರಳಚ್ಚು ಮಾಡಿಸಿದೆ ಎಂದರೆ ಸರಿ.

ನನ್ನ ಗಂಡ ನನ್ನ ಮೇಲೆ ಸಂಶಯ ಮಾಡುತ್ತಿದ್ದಾರೆ ಎಂದು ಹೇಳಿ ನನ್ನ ತಂಗಿ ಆರೋಪಿಯ ವಿರುದ್ದ ಬಳ್ಳಾರಿಯಲ್ಲಿ ಯಾವತ್ತೂ ದೂರು ಕೊಟ್ಟಿಲ್ಲ ಎಂದರೆ ಸರಿ. ನನ್ನ ತಂಗಿಯ ಬಳಿ ಅವರ ಮೊಬೈಲ್ ಇತ್ತು. ದೂರಿನಲ್ಲಿ ಅಥವಾ ಹೇಳಿಕೆಗಳಲ್ಲಿ ಯಾವುದೇ ಮೊಬೈಲ್ ಸಂಖ್ಯೆಗಳನ್ನು ಹೇಳಿ ಬರೆಸಿಲ್ಲ ಎಂದರೆ ಸರಿ.

ಶನಿವಾರಗಳಂದು ಶಾಲೆಗಳು ಅರ್ಧ ದಿವಸ ತೆರೆದಿರುತ್ತವೆ ಎಂದರೆ ಸರಿ. ಚಾಸಾ 11 ಮತ್ತು 12 ರವರ ಜವಾಬ್ದಾರಿಯನ್ನು ಆರೋಪಿಯೇ ತೆಗೆದುಕೊಂಡಿದ್ದರು ಎಂದರೆ ಸರಿ. ಈಗಲೂ ಸಹ ಅವರ ಮಕ್ಕಳು ಆರೋಪಿಯ ವಶದಲ್ಲಿದ್ದಾರೆ ಎಂದರೆ ಸರಿ. ಸಿಂಧನೂರಿನಿಂದ ಬಳ್ಳಾರಿ ಸುಮಾರು 90 ಕಿ. ಮೀ. ದೂರ ಇದೆ. ಆರೋಪಿಯ ಮನೆಗೆ ಬಂದ ನಂತರ ಅವರ ಮನೆಯ ಒಳಗೆ ಎಲ್ಲಾ ಓಡಾಡಲಿಲ್ಲ. ನಾವು ದೂರು ಕೊಡುವ ಕಾಲಕ್ಕೆ ನಮ್ಮ ತಂಗಿಯ ದೇಹದ ಯಾವ ಭಾಗದಲ್ಲಿ ಗಾಯಗಳು ಆಗಿದ್ದವು ಎಂದು ಬರೆಸಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಜೀವ ಇರುವ ಮತ್ತು ಸಾವಿನ ಜೊತೆ ಹೋರಾಟ ಮಾಡುತ್ತಿರುವ ವ್ಯಕ್ತಿಗಳನ್ನು ಅಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಾರೆ ಎಂದರೆ ಸರಿ. ಪೋಲೀಸರು ನನ್ನನ್ನು 16 ನೇ ತಾರೀಖಿನಂದು ವಿಚಾರಣೆ ಮಾಡಿದರು. ನನ್ನ ತಂಗಿ ಈಗ್ಗ ಸತ್ತಿದ್ದಾಳೆ

ಎನ್ನುವ ಬಗ್ಗೆ ನಾನು ಸಂಗ್ರಹಿಸಿದ ಮಾಹಿತಿ ಆಧಾರದಲ್ಲಿ ಹೇಳಿದ್ದೇನೆ, ಖುದ್ದು ನೋಡಿಲ್ಲ. ನನ್ನ ತಂಗಿಯ ಮರಣವನ್ನು ದುರ್ಬಳಕೆ ಮಾಡಿಕೊಂಡು ನಾನು ಮತ್ತು ನನ್ನ ತಾಯಿ ಆರೋಪಿಯ ವಿರುದ್ಧ ಸುಳ್ಳು ಕೇಸು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ.

ನನ್ನ ತಂಗಿಯ ಆರೋಗ್ಯದಲ್ಲಿ ಏರು ಪೇರು ಇತ್ತು. ಅಷ್ಟೊಂದು ಒಳ್ಳೆಯ ಆರೋಗ್ಯ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಪ್ರತಿ ದಿವಸ ಬೆಳಿಗ್ಗೆ ಕೆಲಸಕ್ಕೆ ಹೋದರೆ ಸಂಜೆ ಮನೆಗೆ ಬರುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂಗಿಗೆ ನೌಕರಿ ಮಾಡುವ ಅಭಿಲಾಷೆ ಇತ್ತು ಎಂದರೆ ಸರಿ. ಆರೋಪಿ ತನ್ನ ಹೆಂಡತಿಯನ್ನು ಕೆಲಸಕ್ಕೆ ಕಳುಹಿಸುತ್ತಿರಲಿಲ್ಲ ಮತ್ತು ಕಳುಹಿಸುವ ಇಚ್ಛೆ ಇರಲಿಲ್ಲ ಎಂದರೆ ಸರಿ. ನಾನು ಇಷ್ಟು ವಿದ್ಯಾವಂತಳಾದರೂ ಕೆಲಸಕ್ಕೆ ಹೋಗಲು ಬಿಡುತ್ತಿಲ್ಲ ಎಂದು ನನ್ನ ತಂಗಿ ಚಿಂತೆಯಲ್ಲಿದ್ದಳು ಎಂದರೆ ಸರಿಯಲ್ಲ. ನನ್ನ ತಂಗಿ ಕೆಲಸಕ್ಕೆ ಕಳುಹಿಸಲಿಲ್ಲ ಹಾಗೂ ಆರೋಗ್ಯ ಸಮಸ್ಯೆಯಿಂದ ಮನ ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**